ಕರ್ನಾಟಕ ಸರ್ಕಾರ

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪನಿಬಂಧಕರು ಹಾಗೂ
ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು
ಕಲಬುರಗಿ ಜಿಲ್ಲೆ

ದಿನಾಂಕ: 03/02/2018

## ನೋಂದಣಿ ಪ್ರಮಾಣ ಪತ್ರ

ನೋಂದಣಿ ಸಂಖ್ಯೆ :DRKB/SOR/964/2017-2018.

ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 (1960 ನೆಯ ಇಸವಿ 17 ನೇ ಕ್ರಮಾಂಕದ ಕರ್ನಾಟಕ ಅಧಿನಿಯಮ) ಮೇರೆಗೆ ಈ ಕೆಳಕಂಡ ಹೆಸರಿನ

H.K.E SAMSTHEYA S.S MARGOL KALA VIGNAN HAGU VANIJYA MAHA VIDYALAY SHAHABAD KALEJIN HALE VIDYATHIGAL SANGH AT S.S MARGOL COLLEGE, SHAHABAD , CHITAPUR - 585102, KALABURAGI

ಸಂಘವನ್ನು ನೋಂದಾಯಿಸಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ನೋಂದಣಿ ಶುಲ್ಕ ರೂಪಾಯಿ (ಅಂಕಿಗಳಲ್ಲಿ) 500.00/-

(ಅಕ್ಷರಗಳಲ್ಲಿ ಐದು ನೂರು ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲಾಗಿದೆ.

03/02/2018 ದಿನಾಂಕದಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ನೀಡಲ್ಪಟ್ಟಿದೆ.

Class of Society :GENERAL

ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ
ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು
ಕಲಬುರಗಿ

Remitter's copy

| * ಚಲನ್ ಚಾಲ್ತಿ ಅವಧಿ Challan Validity | ಜಿಲ್ಲೆ District | ಇಲಾಖೆ Department | ಡಿಡಿಓ ಕಚೇರಿ DDO Office | |
|---|---|---|---|---|
| 7 Days | KALABURAGI | DEPARTMENT OF CO-OPERATIVE SOCIETIES | DISTRICT CO-OPERATIVE SOCIETIES OFFICE, GULBARGA | |
| ವರ್ಗ Category | ದಿನಾಂಕ Date | ಚಲನ್ ಉಲ್ಲೇಖ ಸಂಖ್ಯೆ Challan Reference Number | ಡಿಡಿಓ ಕೋಡ್ DDO Code | |
| Government | 01/02/2018 | CR0218042500000263 | 18634O | |
| ಸಂದಾಯದಾರನ ಹೆಸರು Remitter Name | PRESIDENT HKESAMSTHAYASSMARGOLKALAVIGNANHAGU VANIJAYAMAHAVIDDYALAYSAHABADKALLEJINAHALEVIDYARTIG | | | |
| ವಿಳಾಸ Address | AT SHAHABAD | | | |
| ಉದ್ದೇಶ Purpose | ಲೆಕ್ಕ ಶೀರ್ಷಿಕೆ Head of Account | ಉಪ ಉದ್ದೇಶದ ಹೆಸರು Sub Purpose Name | ಉದ್ದೇಶ ನಿರ್ದಿಷ್ಟ ಐಡಿ Purpose Specific ID | ಮೊತ್ತ Amount |
| Payment Of Fee Collected Under The Karnataka Societies Registration Act, 1960 | 0425~00~800~0~08~000 | Registration Fees under Karnataka Societies Registration Act,1960 | NA- | 500 |
| Payment Of Fee Collected Under The Karnataka Societies Registration Act, 1960 | 0425~00~800~0~08~000 | Scanning Fee under Karnataka Societies Registration Act 1960 | NA- | 805 |
| ಸಂದಾಯ ಮಾಡುವ | | | | |

STATE BANK OF INDIA Super Market Branch, Kalaburagi - 2 FEB 2018 CASH RECEIVED

T 3652 2512

State Bank of India Super Market Branch, Kalaburagi 20223

| | | | |
|---|---|---|---|
| ...ಂಕ್ ...nittance Bank | STATE BANK OF INDIA | ಒಟ್ಟು ಮೊತ್ತ<br>Grand Total | 1305 |
| ಪಾವತಿ ಹಂತ<br>Payment Status | Payment pending with agency bank | ಒಟ್ಟು ಮೊತ್ತ ಅಕ್ಷರಗಳಲ್ಲಿ<br>Total Amount in Words | One Thousand Three Hundred Five Only |
| ಪಾವತಿ ವಿವರಗಳು\Payment Details | | | |
| ಪಾವತಿ ವಿಧ<br>Payment Mode | Cash | | |

1960ನೇಯ ಕರ್ನಾಟಕ ಸೊಸೈಟಿಗಳ ರಜಿಸ್ಟ್ರೇಷನ ಆ್ಯಕ್ಟ 2ನೇಯ
ಕಲಂಮಿನ ಪ್ರಕಾರ ರಜಿಸ್ಟ್ರೇಷನ್ ಮಾಡಿಸುವ ಬಗ್ಗೆ ಅರ್ಜಿ

* * * * *

ಇವರಿಗೆ, ದಿನಾಂಕ: -11-2017

ಮಾನ್ಯ ಜಿಲ್ಲಾ ನೊಂದಣಾಧಿಕಾರಿಗಳು
ಹಾಗೂ ಉಪ ನಿಬಂಧಕರು ಸಹಕಾರ ಸಂಘಗಳ ಕಛೇರಿ,
ಆರ್.ಟಿ.ಓ. ಕ್ರಾಸ್ ಹತ್ತಿರ ರಾಜಾಪೂರ ರಸ್ತೆ, ಕಲಬುರಗಿ

ಮಾನ್ಯರೆ,

ಕರ್ನಾಟಕ ಸೊಸೈಟಿಗಳ ನೋಂದಣಿ ಕಾಯ್ದೆ 1960 ರನ್ವಯ ನಾವುಗಳು **ಹೈ.ಕ.ಶಿ. ಸಂಸ್ಥೆಯ ಎಸ್.ಎಸ್.ಮರಗೋಳ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಶಹಾಬಾದ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘ** ಸಾ॥ ಎಸ್.ಎಸ್. ಮರಗೋಳ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಶಹಾಬಾದ, ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ ಸಂಘವನ್ನು ರಚಿಸಲು ಅಪೇಕ್ಷಿಸಿದ್ದೇವೆ. ಈ ಸಂಘವು ವಿವಿದೋದ್ಧೇಶಗಳ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾದ ಸಂಘವಾಗಲಿದೆ.

ಇದರೊಂದಿಗೆ ಸಂಘದ ಗೊತ್ತು ಗುರಿಗಳನ್ನು ಮತ್ತು ನಿಯಮಗಳನ್ನು ಸೂಚಿಸುವ ಪ್ರತಿಯನ್ನು ಲಗತ್ತಿಸಲಾಗಿದೆ. ಇದಲ್ಲದೆ ಸಂಘದ ನೋಂದಣಿ ಹಾಗೂ ಸ್ಕ್ಯಾನಿಂಗ್ ಶುಲ್ಕವನ್ನು ತುಂಬಿದ್ದು, ನಾವುಗಳು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಸದರಿ ಸಂಘವನ್ನು ನೋಂದಣಿ ಮಾಡಿಕೊಡಬೇಕಾಗಿ ವಿನಂತಿ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿಕರು,

1) ಶ್ರೀ ಅನೀಲಕುಮಾರ ತಂದೆ ರಾಮರಾವ ಕೊಪ್ಪಳಕರ್ — ಗೌರವಾಧ್ಯಕ್ಷರು —

2) ಶ್ರೀ ಅನೀಲಕುಮಾರ ತಂದೆ ರೇವಣಸಿದ್ದಪ್ಪ ಇಂಗಿನಶಟ್ಟಿ — ಅಧ್ಯಕ್ಷರು —

3) ಶ್ರೀ ಗುರುಮೂರ್ತಿ ತಂದೆ ರಾಚಪ್ಪ ಬಡಗೇರ — ಉಪಾಧ್ಯಕ್ಷರು —

4) ಶ್ರೀ ಶಂಕರ ಸೋಮಯಾಜಿ ತಂದೆ ಬಾಲಚಂದ್ರ ಭಟ್ಟ — ಉಪಾಧ್ಯಕ್ಷರು —

5) ಶ್ರೀ ವಾಸುದೇವ ತಂದೆ ಶೇಷು ಚವ್ಹಾಣ — ಕಾರ್ಯದರ್ಶಿ —

6) ಶ್ರೀ ರಾಮಣ್ಣ ತಂದೆ ಸಾಬಣ್ಣ — ಜಂಟಿ ಕಾರ್ಯದರ್ಶಿ —

7) ಶ್ರೀ ರಮೇಶ ತಂದೆ ಕೃಷ್ಣ ಭಟ್ಟ — ಜಂಟಿ ಕಾರ್ಯದರ್ಶಿ

8) ಶ್ರೀ ಅಮರ ತಂದೆ ಭೀಮಾಶಂಕರ ಮುತ್ತಟ್ಟಿ — ಖಜಾಂಚಿ

9) ಶ್ರೀ ಶಿವಕುಮಾರ ತಂದೆ ಏಕನಾಥ ಕುಸಾಳೆ — ಸದಸ್ಯರು

10) ಶ್ರೀ ರಾಜಕುಮಾರ ತಂದೆ ಈಶ್ವರಪ್ಪ ಬೆಣ್ಣೂರಕರ — ಸದಸ್ಯರು

11) ಶ್ರೀ ಗುರುಲಿಂಗಪ್ಪ ತಂದೆ ವೀರಪ್ಪ ತುಂಗಳ — ಸದಸ್ಯರು

12) ಶ್ರೀ ಪೀರಪಾಶಾ ತಂದೆ ಮಲ್ಹರರಾವ — ಸದಸ್ಯರು

13) ಶ್ರೀ ವಿಶಾಲ ತಂದೆ ದೇವಾ ರಾಠೋಡ — ಸದಸ್ಯರು

14) ಶ್ರೀ ಬಸವರಾಜ ತಂದೆ ರಾಚಪ್ಪ ಬಡಗೇರ — ಸದಸ್ಯರು

15) ಶ್ರೀ ಜಗನಾಥ ತಂದೆ ಸಾಯಬಣ್ಣ — ಸದಸ್ಯರು

16) ಕುಮಾರಿ ಸುರೇಖಾ ತಂದೆ ಮರಲಿಂಗಪ್ಪ ನಾಲವಾರ — ಸದಸ್ಯರು

17) ಶ್ರೀ ಶಿವಶಂಕರ ತಂದೆ ಸಿದ್ದಲಿಂಗಯ್ಯ ಹಿರೇಮಠ — ಸದಸ್ಯರು

# ಹೈ. ಕ. ಶಿ. ಸಂಸ್ಥೆಯ

## ಎಸ್.ಎಸ್.ಮರಗೋಳ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಶಹಾಬಾದ

## ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘ

ಸಾ॥ ಎಸ್.ಎಸ್. ಮರಗೋಳ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಶಹಾಬಾದ
ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ

---

ದಿನಾಂಕ: 15-10-2017 ರಂದು ಆಡಳಿತ ಮಂಡಳಿಯ ಸಭೆಯನ್ನು ಕರೆಯಲಾಯಿತು. ಈ ಸಭೆಯಲ್ಲಿ ಸಂಘದ ಸರ್ವ ಸದಸ್ಯರು ಹಾಜರಿದ್ದರು. ಈ ಸಭೆಯಲ್ಲಿ ಸಂಘವನ್ನು ಮಾನ್ಯ ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಉಪ ನಿಬಂಧಕರು ಸಹಕಾರ ಸಂಘಗಳ ಇಲಾಖೆ, ಕಲಬುರಗಿ ರವರ ಕಛೇರಿಯಲ್ಲಿ ನೋಂದಾಯಿಸಲು ತೀರ್ಮಾನಿಸಲಾಯಿತು ಮತ್ತು ನೋಂದಾಯಿಸುವ ಅಧಿಕಾರವನ್ನು ಕೊಡುವ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು.

ಚರ್ಚೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಸರ್ವಾನುಮತದಿಂದ ಠರಾವು ಪಾಸ್ ಮಾಡಲಾಯಿತು.

1) ಸಂಘವನ್ನು ಮಾನ್ಯ ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಉಪ ನಿಬಂಧಕರು ಸಹಕಾರ ಸಂಘಗಳ ಕಾರ್ಯಾಲಯ ಕಲಬುರಗಿ ಯಲ್ಲಿ ನೋಂದಾಯಿಸಲು ತೀರ್ಮಾನಿಸಲಾಯಿತು.

2) ಶ್ರೀ ಅನೀಲಕುಮಾರ ತಂದೆ ರೇವಣಸಿದ್ದಪ್ಪ ಇಂಗಿನಶೆಟ್ಟಿ ಅಧ್ಯಕ್ಷರು ಇವರಿಗೆ ಸಂಘದ ನೋಂದಣಿ ಮಾಡುವ ಕಾರ್ಯವನ್ನು ವಹಿಸಿಕೊಡಲಾಯಿತು.

ಈ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರು ವಹಿಸಿಕೊಂಡಿದ್ದರೆ, ಸಂಘದ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

ಅಧ್ಯಕ್ಷರು

ಕಾರ್ಯದರ್ಶಿ

ಇವರಿಗೆ,

ಮಾನ್ಯ ಜಿಲ್ಲಾ ನೋಂದಣಾಧಿಕಾರಿಗಳು
ಹಾಗೂ ಉಪ ನಿಬಂಧಕರು ಸಹಕಾರ ಸಂಘಗಳ ಇಲಾಖೆ,
ಕಲಬುರಗಿ.

ಮಾನ್ಯರೆ,

ವಿಷಯ:- ಅಧಿಕಾರ ವಹಿಸಿಕೊಡುವ ಪತ್ರ.

* * * * *

ಈ ಮೇಲ್ಕಾಣಿಸಿದ ವಿಷಯದ ಬಗ್ಗೆ ತಮ್ಮಲ್ಲಿ ಅರಿಕೆ ಮಾಡಿಕೊಳ್ಳವುದೇನೆಂದರೆ, ನಮ್ಮ ಸಂಘದ ಆಡಳಿತ ಕಾರ್ಯವನ್ನು ನಿರ್ವಹಿಸಲು ಅಧಿಕಾರವನ್ನು ಕೊಟ್ಟು ಆ ಕುರಿತು ತಮ್ಮ ಅವಗಾಹನೆಗಾಗಿ ಈ ಪತ್ರವನ್ನು ಸಲ್ಲಿಸುತ್ತಿದ್ದೇವೆ.

ಹೈ.ಕ.ಶಿ. ಸಂಸ್ಥೆಯ ಎಸ್.ಎಸ್.ಮರಗೋಳ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಶಹಾಬಾದ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘ ಸಾ॥ ಎಸ್.ಎಸ್. ಮರಗೋಳ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಶಹಾಬಾದ ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ ಸಂಘದ ಸರ್ವ ಸದಸ್ಯರ ಸಭೆಯನ್ನು ದಿನಾಂಕ: 15-10-2017 ರಂದು ಕರೆಯಲಾಯಿತು. ಈ ಸಭೆಯು ಆಡಳಿತ ಮಂಡಳಿಯ ಆಯ್ಕೆಮಾಡಿ ಇದರ ಅಧಿಕಾರವನ್ನು 18 ತಿಂಗಳವರೆಗೆ ಎಂದು ನಿರ್ಧರಿಸಲಾಯಿತು. ಮಂಡಳಿಯ ಆಡಳಿತ ವ್ಯವಹಾರವನ್ನು ನೋಡಿಕೊಳ್ಳುವ ಸಂಪೂರ್ಣ ಅಧಿಕಾರವನ್ನು ಸಂಘದ ಅಧ್ಯಕ್ಷರಾದ ಶ್ರೀ ಅನೀಲಕುಮಾರ ತಂದೆ ರೇವಣಸಿದ್ದಪ್ಪ ಇಂಗಿನಶೆಟ್ಟಿ ಇವರಿಗೆ ನೀಡಲಾಯಿತು. ಸಂಘದ ಗೊತ್ತು ಗುರಿಗಳನ್ನು ಹಾಗು ನೋಂದಣಿಯನ್ನು ಮಾಡುವ ಸಂಪೂರ್ಣ ಅಧಿಕಾರವನ್ನು ಸರ್ವಾನುಮತದಿಂದ ನೀಡಲಾಯಿತು.

ಇದನ್ನು ತಮ್ಮ ಅವಗಾಹನೆಗಾಗಿ ಮತ್ತು ಯೋಗ್ಯ ಕ್ರಮಕ್ಕಾಗಿ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಶ್ರೀ ವಾಸುದೇವ ತಂದೆ ಶೇಷು ಚವ್ಹಾಣ
ಕಾರ್ಯದರ್ಶಿ

ಅಧಿಕಾರವನ್ನು ವಹಿಸಿಕೊಂಡವರು:

ಶ್ರೀ ಅನೀಲಕುಮಾರ ತಂದೆ ರೇವಣಸಿದ್ದಪ್ಪ ಇಂಗಿನಶೆಟ್ಟಿ
ಅಧ್ಯಕ್ಷರು

# :: ಜ್ಞಾಪನಾ ಪತ್ರ ::

01) ಸಂಘದ ಹೆಸರು : ಹೈ.ಕ.ಶಿ. ಸಂಸ್ಥೆಯ ಎಸ್.ಎಸ್.ಮರಗೋಳ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಶಹಾಬಾದ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘ

02) ಕಾರ್ಯಾಲಯದ ವಿಳಾಸ : ಸಾ॥ ಎಸ್.ಎಸ್. ಮರಗೋಳ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಶಹಾಬಾದ ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ

03) ಕಾರ್ಯವ್ಯಾಪ್ತಿ : ಕರ್ನಾಟಕ ರಾಜ್ಯದಾದ್ಯಂತ

04) ಸಂಘದ ಉದ್ದೇಶಗಳು:–

1) ಸಂಘವು ಮುಖ್ಯವಾಗಿ ಎಸ್.ಎಸ್. ಮರಗೋಳ ಮಹಾವಿದ್ಯಾಲಯದ ಹಳೆ/ಮಾಜಿ ವಿದ್ಯಾರ್ಥಿಗಳ ಮಧ್ಯೆ ಸಹಕಾರ, ಐಕ್ಯಮತ್ಯ, ಒಗ್ಗಟ್ಟು ಮೂಡುವ ಸಲುವಾಗಿ ರಚಿಸಲಾಗಿದ್ದು, ಮಾಜಿ/ಹಳೆ ವಿದ್ಯಾರ್ಥಿಗಳ ಮಧ್ಯೆ ಸಭೆಗಳನ್ನು ಆಯೋಜಿಸುವದು, ಪ್ರತಿಯೊಬ್ಬರ ಕಷ್ಟ ಸುಖಗಳನ್ನು ಆಲಿಸುವದು, ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವದು.

2) ಸಂಘದ ಸದಸ್ಯರ ಮಕ್ಕಳು ಹೆಚ್ಚಿನ ಅಂಕಗಳನ್ನು ಪಡೆದು ಪಾಸಾದಲ್ಲಿ ಅವರನ್ನು ಸನ್ಮಾನಿಸುವದು, ಪುರಸ್ಕರಿಸುವದು, ಅವರ ಹೆಚ್ಚಿನ ಅಭ್ಯಾಸಕ್ಕಾಗಿ ಬೇಕಾಗುವ ಸಲಹೆ, ಸೂಚನೆಗಳನ್ನು ಕೊಡುವದು.

3) ಸಂಘದ ವತಿಯಿಂದ ಸ್ಪರ್ಧಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವದು, ಸಂಗೀತ ಕಾರ್ಯಕ್ರಮ ಏರ್ಪಡಿಸುವದು, ಮನೋರಂಜನಾ ಕಾರ್ಯಕ್ರಮಗಳನ್ನು ಆಯೋಜಿಸುವದು.

4) ವರ್ಷಕ್ಕೆ ಒಂದು ಬಾರಿ ಎಲ್ಲಾ ಸದಸ್ಯರು ಒಂದು ಕಡೆ ಸೇರಿ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವದು.

5) ನಾಗರೀಕ ಆರೋಗ್ಯ ಹಾಗೂ ಕೌಟುಂಬಿಕ ಕಲ್ಯಾಣದಂತಹ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವದು. ಸಂಘದ ಹೆಚ್ಚಿನ ಅಭಿವೃದ್ಧಿಗಾಗಿ ಸರಕಾರದಿಂದ ದೊರೆಯುವ ಯೋಜನೆಗಳ ಪ್ರಯೋಜನ ಹಾಗೂ ಧನ ಸಹಾಯ ಪಡೆದುಕೊಳ್ಳುವದು.

6) ಈ ಸಂಘವು ರಾಷ್ಟ್ರೀಯ ಭಾವೈಕ್ಯತೆಯನ್ನು ಉಳಿಸುವಲ್ಲಿ ಮತ್ತು ಬೆಳೆಸುವಲ್ಲಿ ಪಾತ್ರ ವಹಿಸುತ್ತದೆ. ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಆಚರಿಸುವುದು ಹಾಗೂ ಗಣ್ಯ ಮಾನ್ಯರ ಜಯಂತಿ ಮುಂತಾದವುಗಳನ್ನು ಆಚರಿಸುವುದು.

7) ಸಂಘದ ವತಿಯಿಂದ ವಿವಿಧ ಸ್ಪರ್ಧೆಗಳನ್ನು, ಕ್ರೀಡೆಗಳನ್ನು ಏರ್ಪಡಿಸುವದು, ವಿಜೇತರಿಗೆ ಬಹುಮಾನಗಳನ್ನು ವಿತರಿಸುವದು. ಸಂಬಂಧಿಸಿದ ಇಲಾಖೆಯಿಂದ ಕ್ರೀಡಾ ಸಾಮಾಗ್ರಿಗಳನ್ನು ಪಡೆದುಕೊಳ್ಳುವದು.

8) ರಾಜ್ಯ ಸರಕಾರದಿಂದ ಹಾಗೂ ಕೇಂದ್ರ ಸರಕಾರದಿಂದ ಜಾರಿಗೊಳಿಸಲಾದ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುವುದು. ಸಮುದಾಯ ಭವನ ನಿರ್ಮಿಸುವದು. ಸಂಘದ ಅಡಿಯಲ್ಲಿ ಶಾಲಾ ಕಾಲೇಜುಗಳನ್ನು ಗ್ರಂಥಾಲಯ, ಅನಾಥಾಶ್ರಮ, ಪ್ರಾರಂಭಿಸುವದು.

9) ಒಟ್ಟಾರೆ ಸಂಘದ ಸದಸ್ಯರ ಪ್ರಗತಿ ಹಾಗೂ ಸದಸ್ಯರ ಮಧ್ಯೆ ಸಹಕಾರ ನೀಡುವದು ಸಹೋದರತ್ವ ಬೆಳೆಸುವದು ಈ ಸಂಘದ ಪರಮೋದ್ದೇಶವಾಗಿದೆ.

10) ಸಂಘದ ಆಸ್ತಿ ಹಾಗೂ ನಿವ್ವಳ ಲಾಭದ ಹಣವನ್ನು ಸಂಘದ ಉದ್ದೇಶಗಳಿಗಾಗಿ ಮಾತ್ರ ವಿನಿಯೋಗಿಸುವುದು.

11) ಸಂಘದ ನೋಂದಣಿ ಮಾಡುವ ಅಧಿಕಾರ ಸಂಘದ ಅಧ್ಯಕ್ಷರಿಗೆ ವಹಿಸಿ ಕೊಡಲಾಗಿದೆ.

* * * * *

ಸಂಘದ ಬೈಲಾ ಪ್ರಕಾರ ರಚಿಸಲಾದ ಕಾರ್ಯಕಾರಿ ಸಮಿತಿ ಸದಸ್ಯರ ಹೆಸರು ವಿಳಾಸದ ಪಟ್ಟಿ.

| ಕ್ರ.ಸಂ. | ಹೆಸರು ಮತ್ತು ವಿಳಾಸ | ವಯಸ್ಸು | ವೃತ್ತಿ | ಹುದ್ದೆ & ಸಹಿ | ಭಾವಚಿತ್ರ |
|---|---|---|---|---|---|
| 1) | ಶ್ರೀ ಅನೀಲಕುಮಾರ ತಂದೆ ರಾಮರಾವ ಕೊಪ್ಪಳಕರ<br>ಸಾ॥ ಪ್ರಶಾಂತ ನಗರ, ಕಲಬುರಗಿ | 55 | ಪ್ರಾಂಶುಪಾಲರು | ಗೌರವಾಧ್ಯಕ್ಷರು |  |
| 2) | ಶ್ರೀ ಅನೀಲಕುಮಾರ ತಂದೆ ರೇವಣಸಿದ್ದಪ್ಪ ಇಂಗಿನಶಟ್ಟಿ<br>ಸಾ॥ ಮನೆ ನಂ. 16–39, ಮೇನ್ ರೋಡ,<br>ಶ್ರೀ ರಾಮ ಚೌಕ, ಶಹಾಬಾದ ತಾ॥ ಚಿತ್ತಾಪೂರ,<br>ಜಿಲ್ಲಾ॥ ಕಲಬುರಗಿ | 48 | ವ್ಯಾಪಾರ | ಅಧ್ಯಕ್ಷರು |  |
| 3) | ಶ್ರೀ ಗುರುಮೂರ್ತಿ ತಂದೆ ರಾಚಪ್ಪ ಬಡಗೇರ<br>ಸಾ॥ ರಾಜಾಪೂರ, ಕಲಬುರಗಿ. | 63 | ಸರಕಾರಿ ಸೇವೆ | ಉಪಾಧ್ಯಕ್ಷರು |  |
| 4) | ಶ್ರೀ ಶಂಕರ ಸೋಮಯಾಜಿ ತಂದೆ ಬಾಲಚಂದ್ರ ಭಟ್ಟ<br>ಸಾ॥ ಪ್ಲಾಟ ನಂ. #19–30/31, ನಿಯರ ಬಸ ಸಟ್ಯಂಡ, ಕುರಶೀದ ಮೋಹಲಾ, ಶಹಾಬಾದ,<br>ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ | 61 | ಸರಕಾರಿ ಸೇವೆ | ಉಪಾಧ್ಯಕ್ಷರು |  |
| 5) | ಶ್ರೀ ವಾಸುದೇವ ತಂದೆ ಶೇಷು ಚವ್ಹಾಣ<br>ಸಾ॥ ಪ್ಲಾಟ ನಂ.# 13–18, ಜೇವರ್ಗಿ ರೋಡ,<br>ಆಶೋಕ ನಗರ, ಶಹಾಬಾದ ತಾ॥ ಚಿತ್ತಾಪೂರ,<br>ಜಿಲ್ಲಾ॥ ಕಲಬುರಗಿ | 38 | ಪತ್ರಕರ್ತರು | ಕಾರ್ಯದರ್ಶಿ |  |
| 6) | ಶ್ರೀ ರಾಮಣ್ಣ ತಂದೆ ಸಾಬಣ್ಣ<br>ಸಾ॥ ಬಸವೇಶ್ವರ ನಗರ, ಶಹಾಬಾದ<br>ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ | 41 | ಸಮಾಜ ಸೇವ | ಜಂಟಿ ಕಾರ್ಯದರ್ಶಿ |  |

| ಕ್ರ.ಸಂ. | ಹೆಸರು ಮತ್ತು ವಿಳಾಸ | ವಯಸ್ಸು | ವೃತ್ತಿ | ಹುದ್ದೆ & ಸಹಿ | ಭಾವಚಿತ್ರ |
|---|---|---|---|---|---|
| 7) | ಶ್ರೀ ರಮೇಶ ತಂದೆ ಕೃಷ್ಣ ಭಟ್ಟ<br>ಸಾ॥ ಜೇಯಿಪಿ ಕಾಲೋನಿ, ಶಹಾಬಾದ<br>ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ | 52 | ಪತ್ರಕರ್ತರು | ಜಂಟಿ ಕಾರ್ಯದರ್ಶಿ |  |
| 8) | ಶ್ರೀ ಅಮರ ತಂದೆ ಭೀಮಾಶಂಕರ ಮುತ್ತಟ್ಟಿ<br>ಸಾ॥ ಪ್ಲಾಟ ನಂ. ನಿಯರ ವೆಟರ್ನರಿ<br>ಹಾಸ್ಪೆಟಲ, ಮೇನ ರೋಡ, ಶಹಾಬಾದ<br>ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ | 48 | ಉದಿಮೇದಾರರು | ಖಜಾಂಚಿ |  |
| 9) | ಶ್ರೀ ಶಿವಕುಮಾರ ತಂದೆ ಏಕನಾಥ ಕುಸಾಳೆ<br>ಸಾ॥ ಮೀಲತ ನಗರ, ಶಹಾಬಾದ,<br>ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ | 31 | ಪತ್ರಕರ್ತರು | ಸದಸ್ಯರು |  |
| 10) | ಶ್ರೀ ರಾಜಕುಮಾರ ತಂದೆ ಈಶ್ವರಪ್ಪ ಬೆಣ್ಣೂರಕರ<br>ಸಾ॥ ಪ್ಲಾಟ ನಂ. 112, ಸೇಡಂ ರೋಡ,<br>ಜಯನಗರ, ಕಲಬುರಗಿ | 42 | ಸಮಾಜ ಸೇವೆ | ಸದಸ್ಯರು |  |
| 11) | ಶ್ರೀ ಗುರುಲಿಂಗಪ್ಪ ತಂದೆ ವೀರಪ್ಪ ತುಂಗಳ<br>ಸಾ॥ ಜೇವರ್ಗಿ ರೋಡ, ಶರಣ ನಗರ,<br>ಶಹಾಬಾದ, ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ | 41 | ಸಮಾಜ ಸೇವೆ | ಸದಸ್ಯರು |  |
| 12) | ಶ್ರೀ ಪೀರಪಾಶಾ ತಂದೆ ಮಲ್ಹರರಾವ<br>ಸಾ॥ ಮನೆ ನಂ. 13–558, ಜೇವರ್ಗಿ ರೋಡ,<br>ರಾಮಾ ಮೋಹಲಾ, ಶಹಾಬಾದ<br>ತಾ॥ ಚಿತ್ತಾಪೂರ ಜಿಲ್ಲಾ॥ ಕಲಬುರಗಿ | 48 | ಸಮಾಜ ಸೇವೆ | ಸದಸ್ಯರು |  |

| ಕ್ರ.ಸಂ. | ಹೆಸರು ಮತ್ತು ವಿಳಾಸ | ವಯಸ್ಸು | ವೃತ್ತಿ | ಹುದ್ದೆ & ಸಹಿ | ಭಾವಚಿತ್ರ |
|---|---|---|---|---|---|
| 13) | ಶ್ರೀ ವಿಶಾಲ ತಂದೆ ದೇವಾ ರಾಠೋಡ<br>ಸಾ॥ ಪ್ಲಾಟ ನಂ. 10, ರೆಸ್ಟ ಕ್ಯಾಂಪ ತಾಂಡಾ, ವಾಡಿ, ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ | 31 | ಸಮಾಜ ಸೇವೆ | ಸದಸ್ಯರು |  |
| 14) | ಶ್ರೀ ಬಸವರಾಜ ತಂದೆ ರಾಚಪ್ಪ ಬಡಗೇರ<br>ಸಾ॥ ಪ್ಲಾಟ ನಂ. 60, ರಾಜಾಪೂರ, ಕಲಬುರಗಿ | 59 | ಸರಕಾರಿ ಸೇವೆ | ಸದಸ್ಯರು |  |
| 15) | ಶ್ರೀ ಜಗನಾಥ ತಂದೆ ಸಾಯಬಣ್ಣ<br>ಸಾ॥ ಬಸವೇಶ್ವರ ನಗರ, ಶಹಾಬಾದ<br>ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ | 31 | ಸಮಾಜ ಸೇವೆ | ಸದಸ್ಯರು |  |
| 16) | ಕುಮಾರಿ ಸುರೇಖಾ ತಂದೆ ಮರಲಿಂಗಪ್ಪ ನಾಲವಾರ<br>ಸಾ॥ ಬಸವೇಶ್ವರ ನಗರ, ಶಹಾಬಾದ<br>ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ | 32 | ಸಮಾಜ ಸೇವೆ | ಸದಸ್ಯರು |  |
| 17) | ಶ್ರೀ ಶಿವಶಂಕರ ತಂದೆ ಸಿದ್ದಲಿಂಗಯ್ಯ ಹಿರೇಮಠ<br>ಸಾ॥ ಶರಣ ನಗರ, ಶಹಾಬಾದ ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ | 33 | ಸಮಾಜ ಸೇವೆ | ಸದಸ್ಯರು |  |

ಸಾಕ್ಷಿದಾರರು:-

1) [illegible]
ಸಾ॥ ಶಹಾಬಾದ ತಾ॥ ಚಿತ್ತಾಪೂರ
ಜಿಲ್ಲಾ॥ ಕಲಬುರಗಿ

2) [illegible]
ಸಾ॥ ಶಹಾಬಾದ ತಾ॥ ಚಿತ್ತಾಪೂರ
ಜಿಲ್ಲಾ॥ ಕಲಬುರಗಿ

## :: ನಿಯಮ ನಿಬಂಧನೆಗಳು ::

01) ಸಂಘದ ಹೆಸರು : ಹೈ.ಕ.ಶಿ. ಸಂಸ್ಥೆಯ ಎಸ್.ಎಸ್.ಮರಗೋಳ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಶಹಾಬಾದ ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘ

02) ಕಾರ್ಯಾಲಯದ ವಿಳಾಸ : ಸಾ॥ ಎಸ್.ಎಸ್. ಮರಗೋಳ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಶಹಾಬಾದ ತಾ॥ ಚಿತ್ತಾಪೂರ, ಜಿಲ್ಲಾ॥ ಕಲಬುರಗಿ

03) ಕಾರ್ಯವ್ಯಾಪ್ತಿ : ಕರ್ನಾಟಕ ರಾಜ್ಯದಾದ್ಯಂತ

04) ಸದಸ್ಯತ್ವ ಅರ್ಹತೆಗಳು :-

ಸದಸ್ಯತ್ವ ಪಡೆಯಬಯಸುವ ಸದಸ್ಯನಿಗೆ ಕನಿಷ್ಠ 18 ವರ್ಷ ವಯಸ್ಸು ಇರಬೇಕು. ಹಾಗೂ ಸದರಿ ಕಾಲೇಜಿನ ಮಾಜಿ ವಿದ್ಯಾರ್ಥಿಯಾಗಿರಬೇಕು.

05) ಸದಸ್ಯತ್ವ ಪಡೆಯುವ ಪದ್ಧತಿ :-

1) ಸಂಘವು ನಿರ್ದಿಷ್ಟಪಡಿಸಿದ ಅರ್ಜಿ ನಮೂನೆಗಳನ್ನು ನಗದು ಹಣ ರೂ.5=00 ನ್ನು ಪಾವತಿ ಮಾಡಿ ಕಾರ್ಯದರ್ಶಿಯವರಿಂದ ಪಡೆದು ಅವಶ್ಯಕ ವಿವರಗಳನ್ನು ಕೊಟ್ಟು ಭರ್ತಿ ಮಾಡಬೇಕು.

2) ಭರ್ತಿ ಮಾಡಿದ ಅರ್ಜಿಯನ್ನು ಕಾರ್ಯದರ್ಶಿಯವರಿಗೆ ಸಲ್ಲಿಸಬೇಕಲ್ಲದೆ ವ್ಯವಸ್ಥಾಪಕ ಮಂಡಳಿಯಿಂದ ಮಂಜೂರಿ ಅನುಮತಿ ಪಡೆಯಬೇಕು.

3) ಸದಸ್ಯತ್ವ ಮಂಜೂರು ಮಾಡುವ ಇಲ್ಲವೇ ತಿರಸ್ಕರಿಸುವ ಹಕ್ಕು ವ್ಯವಸ್ಥಾಪಕ ಮಂಡಳಿಗೆ ಇರುತ್ತದೆ ಹಾಗೂ ಅವರ ನಿರ್ಣಯವೇ ಕೊನೆಯದು.

06) ಸದಸ್ಯತ್ವ ರದ್ಧತಿ :-

1) ಸಾಮಾನ್ಯ ಸದಸ್ಯರು ತಮ್ಮ ಸದಸ್ಯತ್ವವನ್ನು ಉಳಿಸಿಕೊಂಡು ಹೋಗಬೇಕಾದಲ್ಲಿ ಸಮಿತಿಯು ನಿರ್ದಿಷ್ಟಪಡಿಸಿದ ವಂತಿಗೆಯನ್ನು ಸದಸ್ಯತ್ವ ಅವಧಿ ಮುಗಿದ 25 ದಿನಗಳ ಅವಧಿಯೊಳಗಾಗಿ ಪಾವತಿ ಮಾಡಬೇಕು.

2) ಸದಸ್ಯರು ಸಂಘದ ಹಿತಾಸಕ್ತಿಯ ವಿರುದ್ಧವಾಗಿ ಯಾವುದೇ ಚಟುವಟಿಕೆಗಳನ್ನು ಮಾಡಿದ್ದು ಸಂಘಕ್ಕೆ / ಸಮಿತಿಗೆ ತಿಳಿದು ಬಂದರೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವುದಲ್ಲದೇ ಸದಸ್ಯತ್ವವನ್ನು ರದ್ದುಗೊಳಿಸುವ ಹಕ್ಕು ಸಂಘಕ್ಕೆ ಇರುತ್ತದೆ.

3) ಯಾವುದೇ ಸದಸ್ಯರು ಕೋರ್ಟಿನಿಂದ ಕ್ರಿಮಿನಲ್ ಆರೋಪ ಹೊಂದಿದ್ದರೆ ಅಂತಹವರನ್ನು ಸಂಘವು ಪೂರ್ವಾನುಮತಿ ಇಲ್ಲದೇ ಅವರ ಸದಸ್ಯತ್ವವನ್ನು ರದ್ದುಗೊಳಿಸಬಹುದು.

4) ಯಾವುದೇ ಸದಸ್ಯರು ಸಂಘದಿಂದ ನಿವೃತ್ತನಾಗಬಯಸಿದರೆ, ಸಂಘದ ಕಾರ್ಯದರ್ಶಿಯವರಿಗೆ / ಅಧ್ಯಕ್ಷರಿಗೆ ಒಂದು ತಿಂಗಳಿಗೆ ಮುಂಚಿತವಾಗಿಯೇ ಸೂಚನೆ ಕೊಟ್ಟು ಸಂಘದ ಸದಸ್ಯತ್ವದಿಂದ ನಿವೃತ್ತನಾಗಬಹುದು. ಆ ವೇಳೆಗೆ ಸದರಿ ವ್ಯಕ್ತಿಯು ಸಂಘಕ್ಕೆ ಯಾವುದೇ ತರಹದ ಋಣ ಇರಬಾರದು.

07) ಸಾಮಾನ್ಯ ಸದಸ್ಯರ ಹಕ್ಕು ಮತ್ತು ಬಾಧ್ಯತೆಗಳು :-

1) ಸಂಘದ ಸಾಮಾನ್ಯ ಸಭೆಯ ಸೂಚನಾ ಪತ್ರಗಳನ್ನು ಆಯ-ವ್ಯಯ, ಆದಾಯ ವೆಚ್ಚಗಳ ಖಾತೆಯ ಮತ್ತು ವಾರ್ಷಿಕ ವರದಿಯ ನಕಲುಗಳನ್ನು ಪಡೆದುಕೊಳ್ಳಬಹುದು.

2) ಸಂಘದ ಸಾಮಾನ್ಯ ಸಭೆಯಲ್ಲಿ ಹಾಜರಾಗುವದು, ಚರ್ಚಿಸುವುದು, ಮತದಾನ ಮಾಡುವುದು, ಚುನಾವಣೆಗಳಲ್ಲಿ ಸ್ಪರ್ಧಿಸುವುದು ಹಾಗೂ ಸಂಘದ ಹಿತಾಸಕ್ತಿಗೆ ಸಹಕರಿಸುವುದು.

3) ಸಂಘದ ಪ್ರಕಟಣೆಗಳಾಗಲೀ, ಪತ್ರಿಕೆಗಳಾಗಲೀ ಮತ್ತು ನಿಯತಕಾಲಿಕೆಗಳನ್ನು ಸಂಘವು ನಿರ್ದಿಷ್ಟಪಡಿಸಿದ ಕ್ರಯಕೊಟ್ಟು ಪಡೆಯಬೇಕು.

*2ನೇ ಪುಟಕ್ಕೆ.....*

08) <u>ಆಡಳಿತ:-</u>

1) ಸಂಘದಲ್ಲಿ ಈ ಮುಂದೆ ಹೇಳುವ ಪದಾಧಿಕಾರಿಗಳಿರಬೇಕು: (1) ಗೌರವಧ್ಯಕ್ಷರು (2) ಅಧ್ಯಕ್ಷರು, (3) ಉಪಾಧ್ಯಕ್ಷರು, (4) ಉಪಾಧ್ಯಕ್ಷರು (5) ಕಾರ್ಯದರ್ಶಿ, (6) ಜಂಟಿ ಕಾರ್ಯದರ್ಶಿ, (7) ಜಂಟಿ ಕಾರ್ಯದರ್ಶಿ (8) ಖಜಾಂಚಿ, ಹಾಗೂ 9 ರಿಂದ 17ರ ವರೆಗೆ ಸದಸ್ಯರುಗಳಿರಬೇಕು.

2) ಪದಾಧಿಕಾರಿಗಳ ಅಧಿಕಾರವಧಿ ಹಾಗೂ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರ ಕಾರ್ಯಾಚರಣೆಯ ಅವಧಿಯು ಮೂರು ವರ್ಷ ಇರುತ್ತದೆ.

3) ಸಂಘದಲ್ಲಿ ಗರಿಷ್ಠ 20 ಜನರು ಕಾರ್ಯನಿರ್ವಾಹಕ ಕನಿಷ್ಠ 17 ಜನ ಅಥವಾ 09 ಜನ ಸದಸ್ಯರು ಇರಬೇಕು.

4) ಸಂಘದ ಆಡಳಿತ ಸಂಸ್ಥೆಯ ಪದಾಧಿಕಾರಿಗಳ ಹಾಗೂ ಕಾರ್ಯನಿರ್ವಾಹಕ ಮಂಡಳಿಯ ಮೂಲಕ ನಡೆಯುವುದು.

5) ಚುನಾವಣೆಯ ವಿಷಯವನ್ನು ಒಂದು ತಿಂಗಳಿಗೆ ಮುಂಚಿತವಾಗಿಯೇ ಗೊತ್ತಾಗುವಂತೆ ಕಾರ್ಯದರ್ಶಿಯು ಚುನಾವಣಾ ವಿಷಯವನ್ನು ಪತ್ರದೊಂದಿಗೆ ಹೊರಡಿಸಬೇಕು.

6) ಪ್ರತಿ ತಿಂಗಳಿಗೊಮ್ಮೆ ಕಾರ್ಯನಿರ್ವಾಹಕ ಮಂಡಳಿಯ ಸಭೆ ಹಾಗೂ ಪ್ರತಿ ಆರು ತಿಂಗಳಿಗೊಮ್ಮೆ ವಿಶೇಷ ಸಭೆಯನ್ನು ಕರೆಯಬೇಕು. ಕಾರ್ಯನಿರ್ವಾಹಕ ಮಂಡಳಿಯ ಸಭೆಗೆ ಏಳು (7) ಜನ ಸದಸ್ಯರು ಹಾಜರಾದರೆ, ಕಾರ್ಯನಿರ್ವಹಿಸಬಹುದು. ಕೋರಂ ಆಗದೇ ಇದ್ದ ಪಕ್ಷದಲ್ಲಿ ಹಾಜರಿದ್ದ ಸದಸ್ಯರ ಸೂಚನೆಯಂತೆ ದಿನಾಂಕ, ವೇಳೆ ಹಾಗೂ ಸ್ಥಳಗಳನ್ನು ಗೊತ್ತುಪಡಿಸಿ, ಸಭೆಯು ಮರುದಿವಸ ಅದೇ ವೇಳೆ, ಅದೇ ಸ್ಥಳದಲ್ಲಿ ಸಭೆ ಸೇರತಕ್ಕದ್ದು. ಈ ರೀತಿ ಮಾಡಿದಾಗಲೂ ಮುಂದುವರಿದ ಸಭೆಯಲ್ಲಿ ಮೂರು ಜನ ಸದಸ್ಯರಿಗಿಂತ ಕಡಿಮೆ ಹಾಜರಾತಿ ಆದರೂ ಕೋರಂ ಆಗಿದೆ ಎಂದು ತಿಳಿದು ಕಾರ್ಯನಿರ್ವಹಿಸಬಹುದು.

7) ಸಂಘದ ಅಧ್ಯಕ್ಷರು ಮಂಡಳಿಯ ಎಲ್ಲಾ ಸಭೆಗಳ ಅಧ್ಯಕ್ಷತೆಯನ್ನು ವಹಿಸಬೇಕು. ಅಧ್ಯಕ್ಷರ ಗೈರು ಹಾಜರಿಯಲ್ಲಿ ಹಾಜರಿದ್ದ ಸದಸ್ಯರಲ್ಲಿ ( ಕಾರ್ಯದರ್ಶಿಯವರನ್ನು ಬಿಟ್ಟು) ಒಬ್ಬರನ್ನು ಆ ದಿನದ ಸಭೆಯ ಮಟ್ಟಿಗೆ ಅಧ್ಯಕ್ಷರನ್ನಾಗಿ ಆರಿಸಬೇಕು.

09) <u>ಸಂಘದ ಹಣಕಾಸಿನ ನೀತಿ:-</u>

1) ಸಂಘದ ಹಣಕಾಸಿನ ಅವಧಿಯು ಏಪ್ರಿಲ್ 1 ರಿಂದ ಮಾರ್ಚ್ 31 ರ ವರೆಗೆ ಇರುತ್ತದೆ.
2) ಸಂಘದ ಹಣಕಾಸಿನ ವ್ಯವಹಾರವು ಪದಾಧಿಕಾರಿಗಳ ಹಾಗೂ ಕಾರ್ಯನಿರ್ವಾಹಕ ಮಂಡಳಿಯ ವ್ಯಾಪ್ತಿಯಲ್ಲಿ ಇರುತ್ತದೆಯಾದರೂ ಸಂಘದ ಹಣವನ್ನು ಅಧ್ಯಕ್ಷರು ಮತ್ತು ಕಾರ್ಯದರ್ಶಿ ಅಥವಾ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಖಜಾಂಚಿ ಇವರ ಹೆಸರಿನಲ್ಲಿ ಉಳಿತಾಯ ಬ್ಯಾಂಕ್ ಜಂಟಿ ಖಾತೆಯಲ್ಲಿ ಇರಿಸಬೇಕು.
3) ಸಮಿತಿಯ ಸದಸ್ಯರಿಂದ ವಂತಿಗೆ ಹಣವನ್ನು ಸಾಲಿಯಾನ್ ಸ್ವೀಕರಿಸುವುದು, ಅಲ್ಲದೇ ದೇಣಿಗೆಗಳನ್ನು ಸ್ವೀಕರಿಸುವುದು.
4) ತುರ್ತು ಖರ್ಚಿಗಾಗಿ ರೂ.500-00ನ್ನು ನಗದು ಇರಿಸಿಕೊಳ್ಳಬಹುದು. ಸಮಿತಿಯ ಕಾರ್ಯಕಲಾಪಗಳಿಗಾಗಿ ಖರ್ಚು ಮಾಡುವಾಗ ರೂ.200-00 ಕ್ಕಿಂತ ಹೆಚ್ಚು ಖರ್ಚು ಮಾಡಬೇಕಾಗಿ ಬಂದಲ್ಲಿ ( ಖರ್ಚಿನ ಉದ್ದೇಶವನ್ನು) ಕಾರ್ಯನಿರ್ವಾಹಕ ಮಂಡಳಿಯ ಪೂರ್ವಾನುಮತಿ ಪಡೆದಿರಬೇಕು.

10) <u>ಅಧ್ಯಕ್ಷರು :-</u>

1) ಅಧ್ಯಕ್ಷರು ಸಂಘದ ಎಲ್ಲಾ ಸಾಮಾನ್ಯ ಸಭೆಗಳ ಹಾಗೂ ಕಾರ್ಯನಿರ್ವಾಹಕ ಸಭೆಗಳ ಅಧ್ಯಕ್ಷತೆಯನ್ನು ಹಾಗೂ ವಿಶೇಷ ಸಭೆ, ಸಾಮಾನ್ಯ ಸಭೆಗಳ ಅಧ್ಯಕ್ಷತೆಯನ್ನು ವಹಿಸಿಕೊಂಡು ಹೋಗುವುದು.
2) ಕೆಲಸಗಾರರನ್ನು ನೇಮಿಸಿಕೊಳ್ಳುವುದು, ತೆಗೆದು ಹಾಕುವುದು ಹಾಗೂ ಇನ್ನಿತರ ಚಟುವಟಿಕೆಗಳು.
3) ಅಧ್ಯಕ್ಷರ ಕಾರ್ಯಾಚರಣೆಯು ಯಾವುದೇ ತರಹದ ಸಂಭಾವನೆಯನ್ನು ಪಡೆಯದೇ ಮಾಡುವಂತಹದಾಗಿದೆ, ಯಾವುದೇ ತರಹದ ಸಂಭಾವನೆಗೆ ಅವರು ಬಾಧ್ಯರಲ್ಲ.
4) ಅಧ್ಯಕ್ಷರ ಅನುಪಸ್ಥಿತಿಯ ಸಂದರ್ಭ ಬಂದಾಗ ತಮ್ಮ ಪರಭಾರೆಯನ್ನು ಸಂಘ/ಸಂಸ್ಥೆಯ ಕಾರ್ಯದರ್ಶಿಯವರಿಗೆ ವಹಿಸಿಕೊಡುವುದು.

11) ಉಪಾಧ್ಯಕ್ಷರು:-

1) ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಹಾಗೂ ಅವರ ಉಪಸ್ಥಿತಿಯಲ್ಲಿ ಅವರ ಎಲ್ಲಾ ಕಾರ್ಯಭಾರವನ್ನು ನಿರ್ವಹಿಸಲು ಸಹಾಯ ಮಾಡುವುದು ಹಾಗೂ ಅವಶ್ಯಕ ಸಂದರ್ಭದಲ್ಲಿ ಅಧ್ಯಕ್ಷರ ಎಲ್ಲಾ ಕಾರ್ಯಭಾರವನ್ನು ನಿಭಾಯಿಸುವುದು.

3ನೇ ಪುಟಕ್ಕೆ...

12) ಕಾರ್ಯದರ್ಶಿ:-

1) ಕಾರ್ಯದರ್ಶಿಯು ಎಲ್ಲಾ ಕಾಗದ ಪತ್ರಗಳನ್ನು ಜೋಪಾನವಾಗಿಟ್ಟುಕೊಳ್ಳಲು ಹೊಣೆಗಾರರಾಗಿರುತ್ತಾರೆ.
2) ಸಂಘದ ಅಡಿಯಲ್ಲಿ ನಡೆಸಲ್ಪಡುವ ಶಾಲೆ, ಕಾಲೇಜು,ವೃತ್ತಿ ಶಿಕ್ಷಣ ಹಾಗೂ ಇತರೇ ಸಂಘ-ಸಂಸ್ಥೆಗಳನ್ನು ನಡೆಸುವುದು.
3) ಬಾಡಿಗೆಯ ಕಟ್ಟಡದ ವ್ಯವಸ್ಥೆಮಾಡಿ, ಈ ಮೇಲಿನ ಶಾಲೆ,ಕಾಲೇಜು ಇತರೇ ಸಂಘ-ಸಂಸ್ಥೆಗಳನ್ನು ನಡೆಸುವುದು.
4) ಕಾರ್ಯಕಾರಿ ಮಂಡಳಿಯ ಸಭೆ, ಸಾಮಾನ್ಯ ಸಭೆ, ವಿಶೇಷ ಸಾಮಾನ್ಯ ಸಭೆಗಳನ್ನು ಕರೆಯುವ ಜವಾಬ್ದಾರಿಯು ಕಾರ್ಯದರ್ಶಿಯವರಿಗೆ ಕೂಡಿದೆ.
5) ಸಭೆಯಲ್ಲಿ ನಡೆದ ವಿಷಯಗಳನ್ನು ಠರಾವು ಪುಸ್ತಕದಲ್ಲಿ ದಾಖಲು ಮಾಡಿಕೊಳ್ಳುವುದು.
6) ಸಂಘದ ವತಿಯಿಂದ ಬ್ಯಾಂಕ್ ಖಾತೆ ಹೊಂದುವುದು ಹಾಗೂ ಲೆಕ್ಕ ಪತ್ರಗಳನ್ನು ನಿರ್ವಹಿಸಿಕೊಳ್ಳುವ ಜವಾಬ್ದಾರಿ ವಹಿಸುವುದು.
7) ಸಂಘದ ವತಿಯಿಂದ ಅಧ್ಯಕ್ಷರ ಆದೇಶದ ಮೇರೆಗೆ ಸಂಘದ ಇತರೇ ಕಾರ್ಯಭಾರವನ್ನು ನಿರ್ವಹಿಸುವುದು.
8) ಎಲ್ಲಾ ಅವಶ್ಯಕ ಕಾಗದ ಪತ್ರಗಳಿಗೆ ಆದೇಶದ ಮೇರೆಗೆ ಸಹಿ ಹಾಕುವುದು.
9) ಜಿಲ್ಲಾ ನೋಂದಣಾಧಿಕಾರಿಗಳು ಕೇಳಿದಾಗ ಅವಶ್ಯಕವೆನಿಸಿದ ಕಾಗದ ಪತ್ರಗಳನ್ನು ಸಲ್ಲಿಸುವುದು.

13) <u>ಸಹ ಕಾರ್ಯದರ್ಶಿ:-</u>

1) ಕಾರ್ಯದರ್ಶಿಗಳ ಹಾಜರಾತಿ ಹಾಗೂ ಅವರ ಗೈರು ಹಾಜರಾತಿಯಲ್ಲಿ ಅವರಿಗೆ ಸಹಕರಿಸಿಕೊಂಡು ಅವರ ಎಲ್ಲಾ ಕಾರ್ಯಭಾರಗಳಲ್ಲಿ ನೆರವು ನೀಡುವುದಾಗಿದೆ. ಕಾರ್ಯದರ್ಶಿಗಳ ಗೈರು ಹಾಜರಿಯಲ್ಲಿ ಅವರ ಸಂಪೂರ್ಣ ಕಾರ್ಯವನ್ನು ನಿರ್ವಹಿಸುವುದು.

14) <u>ಖಜಾಂಚಿ:-</u>

1. ಸಂಘದ ಕಾಗದ ಪತ್ರಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ನೋಡಿಕೊಂಡು ಹೋಗಲು ಪ್ರಧಾನ ಕಾರ್ಯದರ್ಶಿ ಹಾಗೂ ಸಹ ಕಾರ್ಯದರ್ಶಿಯವರಿಗೆ ಸಹಕರಿಸುವುದು,
2. ಕಾರ್ಯದರ್ಶಿಯ ಗೈರು ಹಾಜರಿಯಲ್ಲಿ ಕಾರ್ಯನಿರ್ವಾಹಕ ಮಂಡಳಿಯ ಅನುಮತಿಗೆ ಒಳಪಟ್ಟು ಸಭೆಯ ಎಲ್ಲಾ ಕಾರ್ಯಕಲಾಪಗಳನ್ನು ನೆರವೇರಿಸುವುದು.
3. ಸಂಘದ ಲೆಕ್ಕ ಪತ್ರಗಳನ್ನಿಡುವುದು, ಹಣಕಾಸಿನ ವ್ಯವಹಾರಗಳನ್ನು ಅಚ್ಚು ಕಟ್ಟಾಗಿ ನಿರ್ವಹಿಸಿಕೊಂಡು ಹೋಗುವುದು.
4. ಸಮಿತಿಯ ಉಪಯೋಗಕ್ಕಾಗಿ ಯಾವುದೇ ವಸ್ತುಗಳನ್ನು ಕೊಂಡಲ್ಲಿ ಅವಶ್ಯಕ ಪಾವತಿಯನ್ನು ಪಡೆಯುವುದು.
5. ಕಾರ್ಯದರ್ಶಿ ಜೊತೆಗೆ ಇನ್ನಿತರ ವ್ಯವಹಾರಗಳನ್ನು ನೋಡಿಕೊಂಡು ಹೋಗಲು ಸಹಕರಿಸುವುದು.

15) <u>ಸಂಘದ ಇತರ ಅಧಿನಿಯಮಗಳು :-</u>

1. ಸಂಘದ ಕಾರ್ಯನಿರ್ವಾಹಕ ಮಂಡಳಿಯ ಅವಶ್ಯಕತೆಗೆ ಅನುಸರಿಸಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಬಹುದು ಕಡಿಮೆ ಮಾಡಬಹುದು ಅಥವಾ ಇಂತಿಷ್ಟೇ ಎಂದು ನಿರ್ದಿಷ್ಟಪಡಿಸಬಹುದು.
2. ಸದಸ್ಯತ್ವದ ವಂತಿಗೆ ವಿವರ:-
   - (1) ಸಾಮಾನ್ಯ ಸದಸ್ಯರು :--: ರೂ. 101-00
   - (2) ದಾನಿಗಳು :--: ರೂ. 201-00
   - (3) ಪೋಷಕರು :--: ರೂ. 501-00
   - (4) ಅಜೀವ ಸದಸ್ಯರು :--: ರೂ. 1001-00

16) <u>ಕಛೇರಿಯ ವರ್ಷ:-</u>

1. ಕಛೇರಿಯು ತನ್ನ ಕಾರ್ಯಭಾರವನ್ನು ಏಪ್ರಿಲ್ ನಿಂದ ಮಾರ್ಚ್ ವರೆಗೆ ನಿರ್ವಹಿಸುತ್ತದೆ.

17) <u>ಕಛೇರಿಯ ಕೆಲಸದ ವೇಳೆ:-</u>

1. ಕಛೇರಿಯ ಕೆಲಸದ ವೇಳೆಯು ಮುಂಜಾನೆ 10-00 ಗಂಟೆಯಿಂದ ಸಾಯಂಕಾಲ 5-30ರ ವರೆಗೆ ಇರುತ್ತದೆ.

4ನೇ ಪುಟಕ್ಕೆ...

81

18) **ಲೆಕ್ಕ ಪರಿಶೋಧನೆ ಹಾಗೂ ವಾರ್ಷಿಕ ವರದಿ (ವರ್ಷ) :-**

1. ಸಂಘದ ಲೆಕ್ಕ ಪತ್ರಗಳನ್ನು ನೋಂದಣಿ ಕಾಯ್ದೆ ಕಲಂ 13ರ ಪ್ರಕಾರ ಆಯಾ ವರ್ಷದ ಏಪ್ರಿಲ್ 1 ರಿಂದ ಮಾರ್ಚ್ 31ರ ವರೆಗೆ ಪ್ರತ್ಯೇಕವಾಗಿಟ್ಟು ಆಡಿಟ್ ವರದಿಯ ವ್ಯವಸ್ಥೆ ಮಾಡುವುದು. ಧನ ಸಹಾಯ ಕೊಟ್ಟಂತಹ ಸಂಘಗಳಿಗೆ ಅವಶ್ಯಕವಿದ್ದಲ್ಲಿ ಬೇರೆ ನಿರ್ದಿಷ್ಟ ಅವಧಿ ಪತ್ರಿಕೆ ತಯಾರಿಸುವ ಏರ್ಪಾಡು ಮಾಡುವುದು.
2. ಲೆಕ್ಕ ಪರಿಶೋಧಕರು ಎರಡು ತೆರನಾಗಿದ್ದು : (1) ಬಾಹ್ಯ ಲೆಕ್ಕ ಪರಿಶೋಧಕರು, (2) ಆಂತರಿಕ ಲೆಕ್ಕ ಪರಿಶೋಧಕರು. ಸಂಘದ ಪದಾಧಿಕಾರಿಯಾಗಲೀ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯನಾಗಲೀ ಇರಕೂಡದು ಸಾಮಾನ್ಯರು ಮಾತ್ರ ಈ ಕೆಲಸವನ್ನು ನಿರ್ವಹಿಸಬೇಕು.
3. ಬಾಹ್ಯ ಲೆಕ್ಕ ಪರಿಶೋಧಕರು ಸಂಘದ ವತಿಯಿಂದ ಚಾರಟರ್ಡ ಅಕೌಂಟೆಂಟ್‌ರಿಂದ ಎಲ್ಲಾ ಲೆಕ್ಕ ಪತ್ರಗಳನ್ನು ಪರಿಶೋಧಿಸಬೇಕು.

19) **ತಿದ್ದುಪಡಿ :- (ಸಂಘದ ಬದಲಾವಣೆ: ನೋಂದಣಿ ಮತ್ತು ಅಧಿನಿಯಮಗಳಿಗೆ ಸಂಬಂಧಿಸಿದ ತಿದ್ದುಪಡಿ) :-**

ಈ ಬಗ್ಗೆ ಕರೆಯಲಾಗುವ ವಿಶೇಷ ಸಾಮಾನ್ಯ ನೋಟೀಸನ್ನು 21 ದಿನಗಳ ಮುಂಚಿತವಾಗಿ ಎಲ್ಲಾ ಸದಸ್ಯರಿಗೆ ಲಿಖಿತ ಬರಹ ಅಥವಾ ಮುದ್ರಿತ ನೋಟೀಸು ಕಳುಹಿಸಬೇಕು. ಸದರಿ ನೋಟೀಸಿನಲ್ಲಿ ಈ ಕೆಳಕಂಡ ವಿವರಗಳಿರಬೇಕು.

1) ಚಾಲ್ತಿ ಇರುವ ಅಧಿನಿಯಮಗಳ ಹೆಸರು, ವಿವರ.
2) ಇಚ್ಛಿತ ಬದಲಾವಣೆಯ ಸ್ವರೂಪ.
3) ಬದಲಾವಣೆ ಮಾಡಲು ಕಾರಣ ಇತ್ಯಾದಿ, ಸ್ಪಷ್ಟವಾಗಿ ನಮೂದಿಸತಕ್ಕದ್ದು.
4) ಸಭೆಗೆ ಹಾಜರಾದ ಒಟ್ಟು ಸದಸ್ಯರ ಸಂಖ್ಯೆಯು 3:4 ರಷ್ಟು ಸದಸ್ಯರ ಒಪ್ಪಿಗೆ ಈ ತಿದ್ದುಪಡಿಗಳಿಗೆ ಅವಶ್ಯಕ.
5) ಠರಾವು ಪಾಸಾದ ಮೂವತ್ತು ದಿನಗಳಲ್ಲಿಯೇ ನೋಂದಣಿ ಕಾಯ್ದೆ 1960 ರಲ್ಲಿ ನಿಗದಿಪಡಿಸಿದ ಶುಲ್ಕ ರೂ. 10-00 ರೊಂದಿಗೆ ನೋಂದಾಣಿ ಅಧಿಕಾರಿಗಳಿಗೆ ಕಳುಹಿಸಬೇಕು.
6) ತಿದ್ದುಪಡಿ ನೋಂದಣಿ ಆದ ನಂತರವೇ ಊರ್ಜಿತವಾಗುವುದು.

20) **ಸಂಘದ ವಿಸರ್ಜನೆ ಅಥವಾ ಬೇರೆ ಸಂಸ್ಥೆಗಳೊಡನೆ ವಿಲೀನಗೊಳಿಸುವುದು:-**

ಒಂದು ವೇಳೆ ಸಂಘದ ವಿಶಿಷ್ಟ ಕಾರಣಗಳಿಗಾಗಿ ವಿಸರ್ಜಿಸಬೇಕಾದಲ್ಲಿ ಇಲ್ಲವೇ ಬೇರೆ ಅಂತಹುದೇ ಗುರಿ ಮತ್ತು ಉದ್ದೇಶಗಳನ್ನು ಹೊಂದಿದ ಬೇರೊಂದು ಸಂಘದೊಡನೆ ವಿಲೀನಗೊಳಿಸಬೇಕಾದಲ್ಲಿ ವಿಶೇಷ ಸಾಮಾನ್ಯ ಸಭೆಯನ್ನು ಕರೆದು 3 : 4 ಸದಸ್ಯರು ಇಷ್ಟಪಟ್ಟಲ್ಲಿ ಹಾಗೆ ಮಾಡಬಹುದು. ಆದರೆ ಈ ಬಗ್ಗೆ ಧನ ಸಹಾಯ ಮಾಡಿದ ರಾಜ್ಯ ಸರಕಾರದ ಪೂರ್ವಾನುಮತಿ ಅವಶ್ಯ ಇಲ್ಲವೇ ನೋದಾಣಿ ಅಧಿಕಾರಿಗಳ ಲಿಖಿತ ಅಪ್ಪಣೆಯನ್ನು ಪಡೆದು ಕೊಡತಕ್ಕ ಸಾಲ ಬಡ್ಡಿ ಸಮೇತ ತೀರಿಸಿ ಉಳಿಯಬಹುದಾದ ಸ್ಥಿರ-ಚರಾಸ್ಥಿಯನ್ನು ಕರ್ನಾಟಕ ರಾಜ್ಯ ಸರಕಾರಕ್ಕೆ ವಿಲೇವಾರಿ ಮಾಡಬಹುದು. 21, 22 ನೇ ಕಲಂ ನಲ್ಲಿ ವಿವರಿಸಿದಂತೆ ವಿಶೇಷ ಸಾಮಾನ್ಯ ಸಭೆ ಕರೆದು ನಿರ್ಣಯವನ್ನು ಕೈಗೊಳ್ಳತಕ್ಕದ್ದು.

21) **ಇತರೆ:**

ಕರ್ನಾಟಕ ಸರ್ಕಾರದ ಸಂಘ ನೋಂದಣಿ ಕಾಯ್ದೆ 1960 ಕ್ಕೆ ವ್ಯತಿರಿಕ್ತವಾಗದ ರೀತಿಯಲ್ಲಿ ಸರ್ಕಾರದಿಂದ ಹೊರಡಿಸಲ್ಪಡುವ ಸುತ್ತೋಲೆ, ಸೂಚನೆ, ಪರಿಪತ್ರ, ಸಲಹೆಗಳನ್ನು ಆಡಳಿತ ಮಂಡಳಿ ಕಟ್ಟುನಿಟ್ಟಾಗಿ ಪಾಲಿಸಲು ಬದ್ಧವಾಗಿರುತ್ತದೆ, ಈ ಸಮಿತಿಯ ನಿಯಾಮಾವಳಿಗಳು ಕರ್ನಾಟಕ ರಾಜ್ಯ ನೋಂದಣಿ ಕಾಯ್ದೆ 1960 ಮತ್ತು ಅದರ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

21) **ಚುನಾವಣೆ:-**

ಚುನಾವಣೆಯನ್ನು ಕೈ ಎತ್ತುವುದರ ಮೂಲಕ ನಡೆಸಲಾಗುವುದು ಅಥವಾ ಪ್ರತಿಯೊಬ್ಬ ಸದಸ್ಯರಿಗೆ ಒಂದೇ ಮತವಿರುತ್ತದೆ ಮತ್ತು ಅದನ್ನು ಖುದ್ದು ಚಲಾಯಿಸತಕ್ಕದ್ದು. 3 ತಿಂಗಳಿಗಿಂತ ಹೆಚ್ಚಿನ ಅವಧಿಯವರೆಗೆ ಚಂದಾ ಬಾಕಿಯಿರುವ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ. ಸರ್ವ ಸದಸ್ಯರ ಸಭೆಗೆ ತಾರೀಖಿಗೆ ಕನಿಷ್ಠ 15 ದಿವಸಗಳ ಮುಂಚಿತವಾಗಿ ಮತದಾನ ಮಾಡಲು ಅರ್ಹರಿರುವ ಸದಸ್ಯರ ಪಟ್ಟಿಯನ್ನು ಕಾರ್ಯದರ್ಶಿಯು ತಯಾರಿಸತಕ್ಕದ್ದು.

22) ನಮ್ಮ ಸಂಘದ ಆವರಣದಲ್ಲಾಗಲೀ, ಸಂಘದ ಒಡೆತನದ ಇಲ್ಲವೇ ಬಾಡಿಗಯ ಯಾವುದೇ ಸಂಕೀರ್ಣ, ಬಹುಮಹಡಿ ಕಟ್ಟಡ, ವಾಸಸ್ಥಳಗಳಲ್ಲಾಗಲೀ, ಯಾವುದೇ ತರಹದ ಬಾಲ ಕಾರ್ಮಿಕರನ್ನು ವಿಶೇಷವಾಗಿ ಗೃಹ ಕೃತ್ಯದ ಬಾಲ ಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಳ್ಳುವುದಿಲ್ಲವೆಂದು ಈ ಸಂಘದ ಎಲ್ಲಾ ಸದಸ್ಯರು ಒಪ್ಪಿಕೊಂಡಿರುತ್ತೇವೆ.

* * * * *